**ಓ.ಎಸ್. ನಂ. 83/2022** **ಪಿ.ಡಬ್ಲ್ಯೂ- 1**

**<u>ಸಾಕ್ಷಿಯನ್ನು ದಿನಾಂಕ 20.6.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಡಿ.ಆರ್.ಎಂ ವಕೀಲರಿಂದಃ</u>

ನಾನು 7 ನೇ ತರಗತಿವರೆಗೆ ಓದಿರುತ್ತೇನೆ. ದಾವಆಸ್ತಿಗಳ ಸರ್ವೆ ನಂಬರ್ ಮತ್ತು ವಿಸ್ತೀರ್ಣವನ್ನು ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ಗೊಲ್ಲನಬೀಡು ಗ್ರಾಮದ ನರಸಿಂಹೇಗೌಡರ ಹೆಂಡತಿ ನಿಂಗಮ್ಮ ನನ್ನ ಅತ್ತೆಯಾಗಬೇಕು. ಅವರು 1 ನೇ ಪ್ರತಿವಾದಿಯ ತಂಗಿಯಾಗಿದ್ದು ನನ್ನ ಸೋದರತ್ತೆ ಸಹ ಆಗಬೇಕು. ಸದರಿ ನಿಂಗಮ್ಮ ಬದುಕಿರುತ್ತಾರೆ. ಕುಂಟೇಗೌಡರಿಗೆ 3 ಜನ ಗಂಡು ಮಕ್ಕಳು ಹಾಗೂ 3 ಜನ ಹೆಣ್ಣು ಮಕ್ಕಳು ಇರುತ್ತಾರೆ. ದಾವಆಸ್ತಿಗಳು ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ಪಹಣಿಯನ್ನು ಹಾಜರುಪಡಿಸಿರುತ್ತೇನೆ. ದಾವಆಸ್ತಿಗಳು ನನ್ನ ತಾತ ಕುಂಟೇಗೌಡರ ಹೆಸರಿನಲ್ಲಿರುತ್ತವೆ. ನನ್ನ ತಾತನ ಹೆಸರಿನಲ್ಲಿರುವ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ನನ್ನ ತಾತನ ಹೆಸರಿನಲ್ಲಿರುವ ಪಹಣಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ8 ಕ್ರಯಪತ್ರವು 1 ನೇ ಪ್ರತಿವಾದಿಗೆ ದಾವ 1 ಮತ್ತು 2 ನೇ ಐಟಂ ಆಸ್ತಿಗಳು ಕ್ರಯವಾಗಿರುವ ದಾಖಲೆ ಎಂದರೆ ಸಾಕ್ಷಿದಾರರು ನನ್ನ ತಾತ ಮತ್ತು ನಿಂಗಮ್ಮ ರವರು ನನ್ನ ತಂದೆಗೆ ಮಾಡಿಕೊಟ್ಟಿರುವ ಕ್ರಯಪತ್ರ ಎನ್ನುವರು. ದಾವ 1 ಮತ್ತು 2 ನೇ ಐಟಂ ಆಸ್ತಿಗಳು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದ್ದು ಅದರಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅತ್ತೆ ಹೆಬ್ಬೆಟ್ಟು ಹಾಕುತ್ತಾರೆ, ನಾನು ಸಹಿ ಮಾಡುತ್ತೇನೆ. ನಿಪಿ9 ದಾಖಲೆಯನ್ನು ದಾವ 5 ನೇ ಐಟಂ ಆಸ್ತಿಯು 1 ನೇ ಪ್ರತಿವಾದಿಗೆ ಹೇಗೆ ಬಂದಿರುತ್ತದೆ ಎಂದು ತೋರಿಸಲು ಹಾಜರುಪಡಿಸಿರುತ್ತೇನೆ. ನನಗೆ ಮದುವೆಯಾದಾಗ 18 ವರ್ಷ ವಯಸ್ಸಾಗಿತ್ತು. ದಾವ 1 ಮತ್ತು 2 ನೇ ಐಟಂ ಆಸ್ತಿಯನ್ನು ನನ್ನ ತಾತ ಕುಂಟೇಗೌಡರು ತನ್ನ ಮಗಳು ನಿಂಗಮ್ಮರವರಿಗೆ ದಾನಪತ್ರ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿದಾರರು ನನ್ನ ತಾತ ಸದರಿ ನಿಂಗಮ್ಮರವರಿಗೆ ಮುಂದೆ ಆಸ್ತಿಯನ್ನು ನನಗೆ ಬರೆದುಕೊಡಲು ಹೇಳಿರುತ್ತಾರೆ ಎನ್ನುವರು. ನಾನು ಮತ್ತು ನಿಂಗಮ್ಮ ಚನ್ನಾಗಿರುತ್ತೇವೆ. ನಿಪಿ8 ರಂತೆ ಕ್ರಯಪತ್ರವಾಗಿರುವ ವಿಚಾರ ಕ್ರಯಪತ್ರವಾದಾಗಲೇ ಗೊತ್ತಾಗಿರುತ್ತದೆ. ಆ ರೀತಿ ವಿಚಾರ ಗೊತ್ತಾದ ಕೂಡಲೇ ದಾವೆ ಹಾಕಿರುವುದಿಲ್ಲ. ಸಾಕ್ಷಿದಾರರು ಮುಂದುವರಿದು ಸದರಿ ಆಸ್ತಿಯನ್ನು ನನ್ನ ತಂದೆ ನನಗೆ ಬರೆದುಕೊಡುತ್ತೇನೆ ಎಂದು ಹೇಳುತ್ತಿದ್ದರು ಎನ್ನುವರು. ನನಗೆ ಎಲ್ಲಾ ವಿಚಾರ ಗೊತ್ತಿದ್ದು ಆಸ್ತಿಯನ್ನು ಕಬಳಿಸಲು ಈ ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಅತ್ತೆ ನಿಂಗಮ್ಮರವರು 1 ನೇ ಪ್ರತಿವಾದಿಯಿಂದ 1.10 ಲಕ್ಷವನ್ನು ಪಡೆದುಕೊಂಡು ದಾವ 1 ಮತ್ತು 2 ನೇ ಐಟಂ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಇರುವುದಿಲ್ಲವೆಂದು ಹಕ್ಕು ನಿವೃತ್ತಿ ಪತ್ರ ಬರೆದುಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಸದರಿ ದಾಖಲೆಗೆ ನಿಂಗಮ್ಮನ ಗಂಡ ನರಸಿಂಹೇಗೌಡ ಮತ್ತು ನಾಗೇಗೌಡ ಎಂಬುವವರು ನೋಟರಿ ಸಮಕ್ಷಮ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.